## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಅನುದಾನ ಬಿಡುಗಡೆಗೊಳಿಸುವ ಬಗ್ಗೆ.

1. ಸರ್ಕಾರದ ಆದೇಶ ಸಂಖ್ಯೆ: ಮೂಅಇ 35 ರಾರಾಹೆ 2009, ದಿನಾಂಕ: 24.04.2010
2. ಸರ್ಕಾರದ ಆದೇಶ ಸಂಖ್ಯೆ: ಮೂಅಇ 146 ರಾರಾಹೆ 2013, ದಿನಾಂಕ: 02.01.2014
3. ಸರ್ಕಾರದ ಆದೇಶ ಸಂಖ್ಯೆ: ಮೂಅಇ 146 ರಾರಾಹೆ 2013, ದಿನಾಂಕ:03.03.2014
4. ಸರ್ಕಾರದ ಆದೇಶ ಸಂಖ್ಯೆ: ಮೂಅಇ 146 ರಾರಾಹೆ 2013, ದಿನಾಂಕ: 17.09.2014
5. ಸರ್ಕಾರದ ಆದೇಶ ಸಂಖ್ಯೆ: ಮೂಅಇ 146 ರಾರಾಹೆ 2013, ದಿನಾಂಕ: 15.03.2016
6. ಸರ್ಕಾರದ ಆದೇಶ ಸಂಖ್ಯೆ: ಮೂಅಇ 146 ರಾರಾಹೆ 2013, ದಿನಾಂಕ: 15.03.2017
7. ಸರ್ಕಾರದ ಆದೇಶ ಸಂಖ್ಯೆ: ಮೂಅಇ 54 ರಾರಾಹೆ 2018, ದಿನಾಂಕ: 24.07.2018 & 27.03.2020.
8. ಸರ್ಕಾರದ ಪತ್ರ ಸಂಖ್ಯೆ: ಮೂಅಇ 54 ರಾರಾಹೆ 2018, ದಿ:05.07.2019 & 15.07.2019.
9. ಪತ್ರ ಸಂಖ್ಯೆ: W.271/DRU-CMGR/LA-Bellur Forest ದಿನಾಂಕ:17.08.2021, Chief Administrative officer, construciton Bengaluru.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರ.ಸಂ. (1) ರ ಸರ್ಕಾರಿ ಆದೇಶದಲ್ಲಿ, ಕಡೂರು-ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಯ ಬಾಕಿ ಕಾಮಗಾರಿಗಳನ್ನು ನೈರುತ್ಯ ರೈಲ್ವೆ ಮತ್ತು ಕರ್ನಾಟಕ ಸರ್ಕಾರ ಶೇ 50:50 ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಮೇಲೆ ಓದಲಾದ ಕ್ರ.ಸಂ. (2) ರ ಸರ್ಕಾರಿ ಆದೇಶದಲ್ಲಿ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.15.49 ಕೋಟಿ ಅನುದಾನವನ್ನು ಜಿಲ್ಲಾಧಿಕಾರಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರಿಗೆ ಬಿಡುಗಡೆಗೊಳಿಸಲಾಗಿದೆ.

3. ಮೇಲೆ ಓದಲಾದ ಕ್ರ.ಸಂ. (3) ರ ಸರ್ಕಾರಿ ಆದೇಶದಲ್ಲಿ ಈ ಹಿಂದೆ ಅನುಮೋದಿಸಲಾಗಿದ್ದ ಕಡೂರು-ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಯಲ್ಲಿನ ರದ್ದುಪಡಿಸಲಾಗಿದ್ದ ವಿಭಾಗ ಚಿಕ್ಕಮಗಳೂರು-ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಯನ್ನು ಅಂದಾಜು ವೆಚ್ಚ ರೂ.657.80 ಕೋಟಿಗಳಲ್ಲಿ ಶೇ 50:50 ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಳ್ಳಲು ಹಾಗೂ ಯೋಜನೆಗೆ ಅಗತ್ಯವಿರುವ ಜಮೀನನ್ನು ಉಚಿತವಾಗಿ ನೈರುತ್ಯ ರೈಲ್ವೆ ಇಲಾಖೆಗೆ ನೀಡಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

4. ಮೇಲೆ ಓದಲಾದ ಕ್ರ.ಸಂ. (4) ರ ಸರ್ಕಾರಿ ಆದೇಶದಲ್ಲಿ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗಾಗಿ ರೂ.25.00 ಕೋಟಿಯನ್ನು ನೈರುತ್ಯ ರೈಲ್ವೆ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ.

5. ಮೇಲೆ ಓದಲಾದ ಕ್ರ.ಸಂ. (5) ರ ಸರ್ಕಾರಿ ಆದೇಶದಲ್ಲಿ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಧಿಕಾರಿ, ಹಾಸನ ಜಿಲ್ಲೆ ಇವರಿಗೆ ರೂ.10.00 ಕೋಟಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

6. ಮೇಲೆ ಓದಲಾದ ಕ್ರ.ಸಂ.(6) ರಲ್ಲಿನ ಸರ್ಕಾರಿ ಆದೇಶದಲ್ಲಿ ದಿನಾಂಕ:15.03.2016 ರ ಆದೇಶದಲ್ಲಿ ಬಿಡುಗಡೆಗೊಳಿಸಲಾದ ರೂ.10.00 ಕೋಟಿಗಳನ್ನು ಸಕಾಲದಲ್ಲಿ ಖಜಾನೆ ಇಲಾಖೆಯಿಂದ ನಗದೀಕರಿಸಿಕೊಂಡು ಬಳಕೆಮಾಡದೇ ಇರುವುದರಿಂದ ಮತ್ತೊಮ್ಮೆ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗಾಗಿ ಅಗತ್ಯವಿರುವ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು ರೂ.10.00 ಕೋಟಿಯನ್ನು ಜಿಲ್ಲಾಧಿಕಾರಿ ಹಾಸನ ಜಿಲ್ಲೆ ಹಾಸನ ಇವರಿಗೆ ಬಿಡುಗಡೆಗೊಳಿಸಲಾಗಿದೆ.

7. ಮೇಲೆ ಓದಲಾದ ಕ್ರ.ಸಂ. (7) ರಲ್ಲಿನ ಸರ್ಕಾರಿ ಆದೇಶಗಳಲ್ಲಿ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಚಿಕ್ಕಮಗಳೂರು ತಾಲ್ಲೂಕು, ಅಂಬಳೆ ಹೋಬಳಿಯ, ಅಂಬಳೆ, ಮಳಲೂರು, ಹಳುವಳ್ಳಿ, ಹಾದಿಹಳ್ಳಿ, ಗಂಜಲಗೋಡು, ಬಾಣಾವರ ಗ್ರಾಮಗಳಲ್ಲಿ ಒಟ್ಟು 131.29 ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು ಮತ್ತು ಪುನರ್‌ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ರನ್ವಯ ಭೂಸ್ವಾಧೀನ ಪಡಿಸಿಕೊಳ್ಳಲು ರೂ.53.00 ಕೋಟಿಯನ್ನು ಜಿಲ್ಲಾಧಿಕಾರಿ ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ಇವರಿಗೆ ಬಿಡುಗಡೆಗೊಳಿಸಲಾಗಿದೆ.

8. ಮೇಲೆ ಓದಲಾದ ಕ್ರ.ಸಂ. (8) ರಲ್ಲಿನ ಸರ್ಕಾರಿ ಪತ್ರಗಳಲ್ಲಿ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ರೂ.33,65,42,255/- ಗಳನ್ನು ಜಿಲ್ಲಾಧಿಕಾರಿ ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ಇವರಿಗೆ ಬಿಡುಗಡೆಗೊಳಿಸಲಾಗಿದೆ.

9. ಮೇಲೆ ಓದಲಾದ ಕ್ರ.ಸಂ. (9) ರಲ್ಲಿನ ಪತ್ರದಲ್ಲಿ ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆಯವರು ರೂ.77,44,481/-ಗಳನು ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಚಿಕ್ಕಮಗಳೂರು ತಾಲ್ಲೂಕು, ಅಂಬಳೆ ಹೋಬಳಿಯ, ಅರಣ್ಯ ಭೂಮಿಯ ಸಿ.ಎ ಪರಿಹಾರಕ್ಕಾಗಿ ನೀಡುವಂತೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

10. ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ :ಮೂಅಇ 08 ರಾರಾಹೆ 2021**
**ಬೆಂಗಳೂರು, ದಿನಾಂಕ:26.11.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆರವರ ಕೋರಿಕೆಯಂತೆ ಚಿಕ್ಕಮಗಳೂರು - ಸಕಲೇಶಪುರ ಹೊಸ ರೈಲು ಮಾರ್ಗ ಯೋಜನೆಗೆ ಸಂಬಂಧಿಸಿದಂತೆ ಚಿಕ್ಕಮಗಳೂರು ತಾಲ್ಲೂಕು, ಅಂಬಳೆ ಹೋಬಳಿಯ, ಅರಣ್ಯ ಭೂಮಿಯ ಸಿ.ಎ ಪರಿಹಾರಕ್ಕಾಗಿ ರೂ.77,44,481/-ಗಳನ್ನು (ಎಪತ್ತೇಳು ಲಕ್ಷದ ನಾಲವತ್ತ ನಾಲ್ಕು ಸಾವಿರದ ನಾಲ್ಕನೂರ ಎಂಭತ್ತೊಂದು ರೂಪಾಯಿ ಮಾತ್ರ) ಜಿಲ್ಲಾಧಿಕಾರಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

2. ಈ ಮೊತ್ತವನ್ನು 2021-22ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465-01-190-3-05-132 ಹೊಸ ಯೋಜನೆಗಳ ವೆಚ್ಚ ಹಂಚಿಕೆ - ಬಂಡವಾಳ ವೆಚ್ಚಗಳು" ಇದರಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ಭರಿಸತಕ್ಕದ್ದು. ಈ ಮೊತ್ತವನ್ನು ಚಿಕ್ಕಮಗಳೂರು ಜಿಲ್ಲಾಧಿಕಾರಿ ಖಾತೆಗೆ ಖಜಾನೆ-2 ರಲ್ಲಿ ಅಪ್‌ಲೋಡ್ ಮಾಡುವುದು.

3. ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ಇವರು ಸರ್ಕಾರದಿಂದ ಬಿಡುಗಡೆಗೊಳಿಸಲಾದ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಹಾಗೂ ಭೌತಿಕ ಪ್ರಗತಿಯ ವರದಿಯನ್ನು ಸಲ್ಲಿಸತಕ್ಕದ್ದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಅಇ 01 ಟಿಎಫ್‌ಪಿ 2021 ದಿನಾಂಕ:30.09.2021 ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Kan

(ಎಸ್.ಎನ್.ಕಲಾವತಿ )
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ, ಬಂದರು
ಮತ್ತು ಒಳನಾಡು ಜಲಸಾರಿಗೆ ಇಲಾಖೆ.

**ಗೆ**

1. ಪ್ರಧಾನ ಮಹಾಲೇಖಪಾಲರು (ಆಡಿಟ್ – ೧, ೨, ೩/ ೦೦ & ಇ), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು-01.

2. ಅಧ್ಯಕ್ಷರು, ರೈಲ್ವೆ ಮಂಡಳಿ, ನವದೆಹಲಿ.

3. ಮುಖ್ಯ ಆಡಳಿತಾಧಿಕಾರಿ, ನೈರುತ್ಯ ರೈಲ್ವೆ, ನಂ.18, ಮಿಲ್ಲರ್ಸ್ ರಸ್ತೆ, ಬೆಂಗಳೂರು – 560046.

4. ಮುಖ್ಯ ಅಭಿಯಂತರರು (ನಿರ್ಮಾಣ/ಪೂರ್ವ), ನೈರುತ್ಯ ರೈಲ್ವೆ, ನಂ.18, ಮಿಲ್ಲರ್ಸ್ ರಸ್ತೆ, ಬೆಂಗಳೂರು – 560046.

5..ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.

6. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಇಲಾಖೆ, 7ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

7. ಆಯುಕ್ತರು, ಟಿ. ಎನ್. ಎಂ. ಸಿ., ಖನಿಜ ಭವನ, ಬೆಂಗಳೂರು.

8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ – 1), ವಿಧಾನ ಸೌಧ, ಬೆಂಗಳೂರು.

9. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು

10. ಸರ್ಕಾರದ ಅಪರ ಕಾರ್ಯದರ್ಶಿ (ರೈಲ್ವೆ) ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ. ಬೆಂಗಳೂರು

11. ನಿರ್ದೇಶಕರು, ಪಿಪಿಪಿ ಕೋಶ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.